# ನಿರ್ದೇಶಕರ ಸಹಜಾಭಿನಯ

ಶ್ರೀಮದ್ಗಂಭೀರ ವದನ. ಧವಳಕೇಶಿ. ಮಧ್ಯಕ್ಕೆ ತೆಗೆದ ಬೈತಲೆ. ಸ್ಪಷ್ಟಮಾತು. ಅದರ ತುಂಬಾ ಸಾಧನಾಭಾವ. 'ಅಂಥ ಆರ್ಮಿ ಕತೆಯನ್ನಿಟ್ಟುಕೊಂಡು ಯಾರಾದರೂ ಇನ್ನೊಂದು ಸಿನಿಮಾ ಮಾಡಿ ತೋರಿಸಲಿ ನೋಡೋಣ' ಎಂದು ತಮ್ಮ ಘನ ಚಿತ್ರದ ಕುರಿತು ತಾವೇ ನಿಮಿಷಗಟ್ಟಲೆ ಮಾತನಾಡುವಷ್ಟು ಹೆಮ್ಮೆ. ಹೆಸರಘಟ್ಟ ಬಳಿ ಚಿತ್ರನಗರಿ ನಿರ್ಮಿಸಲು ಸರ್ಕಾರ ಕೊಟ್ಟ ಜಾಗ ಇದುವರೆಗೆ ಬಳಕೆಯಾಗಲೇ ಇಲ್ಲವಲ್ಲ ಎಂದು ಅವರು ಹಳಹಳಿಸುತ್ತಲೇ ಇರುತ್ತಾರೆ. ಬ್ಯಾಂಕ್‌ನಲ್ಲಿ ಸಾಲ ಎತ್ತಿ, ರಿಯಲ್‌ಸ್ಟಾರ್‌ನ ಇಟ್ಟುಕೊಂಡು ತೆಗೆದ ಚಿತ್ರವೊಂದನ್ನು ಡಬ್ಬದಿಂದ ಹೊರತೆಗೆದು ತೋರಿಸಲೂ ಆಗದಷ್ಟು ಬಿಕ್ಕಟ್ಟು ಅವರದ್ದು. ಮಗನನ್ನು ಮೇಲೆತ್ತಲು ಇನ್ನಿಲ್ಲದಂತೆ ಯತ್ನಿಸುತ್ತಿರುವ ಅವರು ರೀಮೇಕ್ ಚಿತ್ರವನ್ನು ನಿರ್ದೇಶಿಸುವ ಗೊಡವೆಗೆ ಹೋಗುವುದಿಲ್ಲ. ಆದರೆ ರೀಮೇಕ್ ನಿರ್ಮಾಣ ಅಪಥ್ಯವಲ್ಲ. ಸಹೋದರಿ ತೆಗೆದ ಚಿತ್ರಗಳ ರೀಮೇಕ್ ಗುಟ್ಟನ್ನು ಬಿಡುಗಡೆಯಾಗುವವರೆಗೆ ಕಾಪಾಡಿದ್ದಾಗಲೂ ಅವರಿಗೆ ನೈತಿಕತೆಯ ಪ್ರಶ್ನೆ ಎದುರಾಗಿರಲಿಲ್ಲ.

ಒಮ್ಮೆ ಆ ನಿರ್ದೇಶಕರು ಕನ್ನಡದ 'ಶಕ್ತಿಯುತ ನಾಯಕ'ರೊಬ್ಬರ ಬಳಿಗೆ ಹೋಗಿ ಮಾಸ್ತಿಯವರ ಐತಿಹಾಸಿಕ ಕಾದಂಬರಿಯೊಂದನ್ನು ಇಟ್ಟುಕೊಂಡು ಸಿನಿಮಾ ಮಾಡುವ ಪ್ರಸ್ತಾಪವಿಟ್ಟರು. ತಮ್ಮ ತಂದೆ ಮಾಡಬಹುದಾಗಿದ್ದ ಘನತೆವೆತ್ತ ಅಂಥ ಪಾತ್ರದಲ್ಲಿ ತಮ್ಮನ್ನು ತಾವು ಕಲ್ಪಿಸಿಕೊಳ್ಳಲು ಕೂಡ 'ಶಕ್ತಿಯುತ ನಾಯಕ' ತಯಾರಿರಲಿಲ್ಲ. ಆ ಚಿತ್ರದಲ್ಲಿ ತಾವು ನಟಿಸಲು ಸಾಧ್ಯವಿಲ್ಲವೆಂದು ನಾಯಕ ವಿನಯದಿಂದಲೇ ಹೇಳಿ ಕಳುಹಿಸಿದರು.

ಆ ಘಟನೆಯನ್ನು ಮೊನ್ನೆ ಮೊನ್ನೆ ಆ ನಿರ್ದೇಶಕರು ದೊಡ್ಡ ಅಂಗಳದಲ್ಲಿ ಮಾತು-ಮಂಥನದಲ್ಲಿ ತೊಡಗಿದ್ದಾಗ ನೆನಪಿಸಿಕೊಂಡರು. ಆದರೆ ಅವರು ನಾಯಕನ ಮಾತನ್ನು ದಾಟಿಸಿದ ರೀತಿ ಮಾತ್ರ ಭಿನ್ನವಾಗಿತ್ತು. 'ನಾನು ಹೇಳಿದ ಐತಿಹಾಸಿಕ ಕಾದಂಬರಿಯ ವಸ್ತು ಆ ನಟನಿಗೆ ಅರ್ಥವಾಗಲೇ ಇಲ್ಲ' ಎಂಬುದು ಅವರ ಧಾಟಿ. ಅವರ ಆ ಮಾತನ್ನು ಕೇಳಿ ಶಕ್ತಿಯುತ ನಾಯಕ ನಕ್ಕಿರಬಹುದು. ಘಟನೆ ಅಥವಾ ಅನುಭವವನ್ನು ತಮ್ಮ ತಮ್ಮ ಮೂಗಿನ ನೇರಕ್ಕೆ ಎಷ್ಟು ಸುಲಭವಾಗಿ ಹೇಳಿಕೊಳ್ಳಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

ತಾಂತ್ರಿಕವಾಗಿ ಪಳಗಿರುವ, ನೆನಪಿನಲ್ಲಿಟ್ಟುಕೊಳ್ಳುವಂಥ ಚಿತ್ರಗಳನ್ನು ಕೊಟ್ಟ, ಸೂಕ್ಷ್ಮಮತಿ ಎಂದೂ ಹೆಸರಾದ ಆ ನಿರ್ದೇಶಕರೀಗ ಕಷ್ಟದಲ್ಲಿದ್ದಾರೆ ಎಂದು ಚಿತ್ರೋದ್ಯಮದ ಅನೇಕರು ಹೇಳುತ್ತಿರುತ್ತಾರೆ. ಕೆಣಕಿದರೆ ಸುದ್ದಿಮಿತ್ರರ ಮೇಲೆ ಎಗರೆಗರಿ ಬೀಳುವಷ್ಟು ಕ್ರುದ್ಧರೂ ಹೌದು.

ಇತ್ತೀಚೆಗೆ ಆ ನಿರ್ದೇಶಕರ ಪುತ್ರ ಇನ್ನೊಂದು ಚಿತ್ರಕ್ಕೆ ಬಣ್ಣಹಚ್ಚಿ ನಿಂತಿದ್ದರು. ಸಿಹಿಸಿಹಿಯಾದ ಚಿತ್ರವೆಂದು ಬೀಗುತ್ತಿದ್ದ ಅವರ ಪಕ್ಕದಲ್ಲಿದ್ದದ್ದು ಪಳಗಿದ ನಟಿ; ಒಂದು ಮಗುವಿನ ತಾಯಿ; ನಿರ್ಮಾಪಕಿಯಾಗಿ ಒಂದು ಹೆಸರು, ನಟಿಯಾಗಿ ಇನ್ನೊಂದು ಹೆಸರು. ತಮ್ಮ ಮರುಪ್ರವೇಶಕ್ಕೆ ಅವರು ಮೊದಲು ನಿರ್ದೇಶಕಿಯನ್ನು ಆರಿಸಿಕೊಂಡರಂತೆ. ಆ ನಿರ್ದೇಶಕಿ ಇಲ್ಲಿ ಪ್ರಸ್ತಾವಿಸಿರುವ ನಿರ್ದೇಶಕರ ಸಹೋದರಿ. ಎಂಬಲ್ಲಿಗೆ ನಿರ್ದೇಶಕರು ತಮ್ಮ ಕುಟುಂಬಕ್ಕೂ ಚಿತ್ರರಂಗಕ್ಕೂ ಇರುವ ನಂಟನ್ನು ಹೇಗೆಲ್ಲಾ ಮುಂದುವರಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಇದೊಂಥರಾ ಆ್ಯಕ್ಷನ್-ಕಟ್-ಆ್ಯಕ್ಷನ್ ತರಹವೇ ಅಲ್ಲವೇ?

-ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68